( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.124/200920

ದಿನಾಂಕಃ04/11/2023, ಪಿ. ಪಿಬ್ಲ್ಯೂ-1

ಮುಂದುವರೆದ ಪಾಟೀ ಸವಾಲು ಃ ಶ್ರೀ ಆರ್.ಕೆ.ಎಂ.ವಕೀಲರಿಂದಃ

ವಾದ ಪತ್ರದ 3 ನೇ ಖಂಡಿಕೆಯಲ್ಲಿ ಇರುವ ಆಸ್ತಿಗಳನ್ನು ಮುದ್ದನಹಳ್ಳಿ ಗ್ರಾಮದ ಕಾಳೇಗೌಡ, ಪುಟ್ಟಸ್ವಾಮಿಗೌಡ, ತಿಮ್ಮೇಗೌಡ ರವರಿಗೆ ನನ್ನ ತಂದೆ 42 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಲಕ್ಕನಹಳ್ಳಿ ಗ್ರಾಮಕ್ಕೆ ಬಂದಾಗ ನನಗೆ ಬುದ್ಧಿ ಬಂದಿತ್ತು. ಎಷ್ಟು ವರ್ಷಗಳ ಹಿಂದೆ ನನ್ನ ತಂದೆ ಬಂದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿದ ಸಂಬಂಧ ಕ್ರಯ ಪತ್ರಗಳನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ನನ್ನ ತಂದೆ ಲಕ್ಕನಹಳ್ಳಿ ಗ್ರಾಮಕ್ಕೆ ಬಂದಾಗ ನನಗೆ 12-13 ವರ್ಷ ವಯಸಾಗಿತ್ತು. ನನ್ನ ತಂದೆ ಲಕ್ಕನಹಳ್ಳಿ ಗ್ರಾಮಕ್ಕೆ ಬಂದಾಗ ಲಕ್ಕನಹಳ್ಳಿ ಗ್ರಾಮ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಗಳು ಇದ್ದವು.

ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆದರೆ ಅರಕಲಗೂಡು, ಕೊಣನೂರು ರಸ್ತೆಯಲ್ಲಿ ಮುಕ್ಕಾಲು ಎಕರೆ ಜಮೀನು ಇತ್ತು ಎಂದು ನುಡಿಯುತಾರೆ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ದಾವಾ ಸ್ವತ್ತುಗಳನ್ನು ನನ್ನ ತಂದೆ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಹಾಗೂ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಇಬ್ಬರು ಹೆಣ್ಣುಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯ ಪರಿಶ್ರಮದಿಂದ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ನನ್ನನ್ನು 1987 ರಲ್ಲಿ ನಾಡಪ್ಪನಹಳ್ಳಿಕೊಪ್ಪಲು ಗ್ರಾಮ ರಾಜೇಗೌಡ ಎಂಬುವವರಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ ಎಂದರೆ ಸರಿ. ವಿವಾಹವಾದ ನಂತರ ನನ್ನನ್ನು ನನ್ನ ತಂದೆ ಅವರ ಮನೆಗೆ ಕರೆದುಕೊಂಡು ಬಂದರು. ನನ್ನ ತಂದೆ ಲಕ್ಕನಹಳ್ಳಿ ಗ್ರಾಮಕ್ಕೆ ಬಂದಾಗ, ನಾನು ಚಿಕ್ಕವಳಾಗಿದ್ದು, ದುಡಿಯುವ ಸಾಮರ್ಥ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಪರಿಶ್ರಮದಿಂದ ಕೊಂಡಂತಹ ಆಸ್ತಿಗಳು ಆಗಿದ್ದು, ನಾನು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಓದಲು ಬರೆಯಲು ಮತ್ತು ಸಹಿ ಮಾಡಲು ಬರುತ್ತಿರಲಿಲ್ಲ. ಹೆಬ್ಬೆಟ್ಟು ಗುರುತು ಮಾತ್ರ ಹಾಕುತ್ತಿದ್ದರು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು